**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ**

ಅಸಲು ದಾವೆ ನಂ**. 1077/2021** ದಿನಾಂಕಃ **23.06.2026**

ಪಿ.ಡಬ್ಲೂಃ**-03**

**: ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು :**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ. ಎಲ್.ಡಿ.ಹೆಚ್. ರವರಿಂದಃ-**

ನನಗೆ ವಾದಿ ಮತ್ತು ಪ್ರತಿವಾದಿಯ ಪರಿಚಯ ಇದೆ. ಸದರಿಯವರು ಅಡಹಳ್ಳಿ ಗ್ರಾಮದಲ್ಲಿ ವಾಸ ಇದ್ದಾರೆ ಎಂದರೆ ಸರಿ. ವಾದಿ ತಂದೆಯ ಹೆಸರು ಸಂಗಪ್ಪ. ಸಂಗಪ್ಪನ ತಂದೆಯ ಹೆಸರು ನನಗೆ ಗೊತ್ತಿಲ್ಲ. ರಾಮಪ್ಪನವರಿಗೆ ಸಂಗಪ್ಪ ಮತ್ತು ತಾಯವ್ವ ಎಂಬ ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ತಾಯವ್ವರಿಗೆ ರಾಮಪ್ಪ ಎಂಬ ಮಗ ಇದ್ದ ಎಂದರೆ ನನಗೆ ಗೊತ್ತಿಲ್ಲ. ಸದರಿ ರಾಮಪ್ಪನ ಮಕ್ಕಳು 12 ರಿಂದ 14 ನೇ ಪ್ರತಿವಾದಿ ಎಂದರೆ ನನಗೆ ಗೊತ್ತಿಲ್ಲ. ಸಂಗಪ್ಪ ಮತ್ತು ತಾಯವ್ವ ಅವರ ಕುಟುಂಬದ ಆಸ್ತಿಗಳನ್ನು ಪಾಲು ವಾಟ್ನಿ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರವಾಗಿ ಸಂಗಪ್ಪನಿಗೆ 11 ಎಕರೆ 3 ಗುಂಟೆ ತಾಯವ್ವನಿಗೆ 11 ಎಕರೆ 5 ಗುಂಟೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಸಂಗಪ್ಪನಿಗೆ ಇಬ್ಬರು ಹೆಂಡತಿಯರು ಇದ್ದರು ಎಂದರೆ ನನಗೆ ಗೊತ್ತಿಲ್ಲ.

1ನೇ ವಾದಿಯ ತಾಯಿಯ ಹೆಸರು ನನಗೆ ಗೊತ್ತಿಲ್ಲ. 1ನೇ ವಾದಿ ಮತ್ತು ಅವರ ಅಣ್ಣ ತಮ್ಮಂದಿರು ಯಾವಗ ಪಾಲು ವಾಟ್ನಿ ಮಾಡಿಕೊಂಡರು ನನಗೆ ಮಾಹಿತಿ ಇಲ್ಲ. 1ನೇ ವಾದಿಗೆ ಗಂಡು ಸಂತಾನ ಇಲ್ಲದ ಕಾರಣ ಪ್ರತಿವಾದಿಯರ ತಂದೆ ಬಸಪ್ಪನ ಜೊತೆಯಲ್ಲಿರುತ್ತಿದ್ದರು ಎಂದರೆ ಸರಿಯಲ್ಲ. ಆತನ ಎಲ್ಲ ಯೋಗಕ್ಷೇಮವನ್ನು ಬಸಪ್ಪ ನೋಡಿಕೊಳ್ಳುತ್ತಿದ್ದ ಎಂದರೆ ಸರಿಯಲ್ಲ. 2004ನೇ ಸಾಲಿನಲ್ಲಿ 1ನೇ ವಾದಿಯು ಬಸಪ್ಪನವರಿಂದ ರೂ.20 ಸಾವಿರ ಹಣ ಪಡೆದು ತನ್ನ ಹಿಸ್ಸೆ ಹಕ್ಕನ್ನು ಬಿಟ್ಟುಕೊಡಲು ಒಪ್ಪಿಕೊಂಡಿದ್ದ ಎಂದರೆ ಸರಿಯಲ್ಲ. ಅದರಂತೆ ಬಸಪ್ಪನು ವಾದಿಯ ಹಿಸ್ಸೆಯ ಆಸ್ತಿಯನ್ನು 1ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿದ್ದ ಎಂದರೆ ಸರಿಯಲ್ಲ. ಅದರಂತೆ 30.08.2005 ರಲ್ಲಿ ಒಂದು ದಾಖಲೆಗೆ ತನ್ನ ಹೆಂಡತಿ ಮತ್ತು ಮಕ್ಕಳ ಸಹಿ ಮಾಡಿ 1ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ದಾಖಲೆಯಂತೆ ಡೈರಿ ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ. ಉತಾರದಲ್ಲಿ 1ನೇ ಪ್ರತಿವಾದಿಯ ಹೆಸರು ನಮೂದು ಇದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಖೊಟ್ಟಿ ರೀತಿಯಲ್ಲಿ ಹೆಸರು ದಾಖಲು ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ 1ನೇ ಪ್ರತಿವಾದಿಯು ಕಬ್ಜಾ ವಹಿವಾಟು ಹೊಂದಿದ್ದಾರೆ ಎಂದರೆ ಸರಿಯಲ್ಲ. ವಾದಿಯರು ಇಲ್ಲಿಯವರಿಗೆ ಯಾವುದೇ ಹರಕತ್ತು ಮಾಡಿಲ್ಲ ಎಂದರೆ ಸಾಕ್ಷಿಯು ಖೊಟ್ಟಿ ಕಾಗದ ಸೃಷ್ಟಿಸಿಕೊಂಡ ನಂತರ ಈ ದಾವೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಪ್ರತಿವಾದಿಯರಿಗೆ ಜಮೀನು ಬಿಟ್ಟುಕೊಟ್ಟ ವಿಚಾರ ಗೊತ್ತಿದ್ದರೂ 1ನೇ ವಾದಿ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

(ಓಂಕಾರಮೂರ್ತಿ ಹೆಚ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ